**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ದೇವದುರ್ಗ.**

**ಸಿ.ಸಿ ನಂಬರ್ಃ 1765/2025**

**ಪಿರ್ಯಾದಿ** ಃ **ಸರ್ಕಾರದ ಪರವಾಗಿ** ದೇವದುರ್ಗ **ಪೊಲೀಸರು,**
**ದೇವದುರ್ಗ ತಾಲ್ಲೂಕು.**

**ವಿರುದ್ಧ**

**ಆರೋಪಿ** ಃ 1. ಪ್ರಕಾಶ ತಂದೆ ವಿಶ್ವನಾಥ, 45 ವರ್ಷ,

ಉಃ ಚಾಲಕ, ವಾಸಃ ಕಲಮಲ,

ತಾಃ ರಾಯಚೂರು, ಜಿಃ ರಾಯಚೂರು.

2. ನೂರ್ ಬೇಗ ತಂದೆ ಸರ್ದಾರ ಬೇಗ, 46 ವರ್ಷ,

ಉಃ ಕೂಲಿ, ವಾಸಃ ಸೋನಿಯ ನಗರ, ಮನವಿ,

ತಾಃ ಮನವಿ, ಜಿಃ ರಾಯಚೂರು.

3. ಪಾಹೀಮಾ ತಂದೆ ಜೀಲಾನಿ, 20 ವರ್ಷ,

ಉಃ ಕೂಲಿ, ವಾಸಃ ಮನವಿ,

ತಾಃ ಮನವಿ, ಜಿಃ ರಾಯಚೂರು.

**ದೋಷಾರೋಪಣೆ**

**ಶ್ರೀ ರಫೀಕ್ ಅಹ್ಮದ್ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ದೇವದುರ್ಗ, ಆದ ನಾನು ಈ ಕೆಳಗಿನ ದೋಷಾರೋಪಣೆಯನ್ನು ನಿಮ್ಮ ಮೇಲೆ ಹೊರಿಸುವುದೇನೆಂ ದರೆ,**

ದಿನಾಂಕ 02.11.2025 ರಂದು ಮಧ್ಯರಾತ್ರಿ 12.25 ಗಂಟೆಗೆ ಆರೋಪಿತರು ಕಂಟೇನರ್ ವಾಹನ (ಲಾರಿ) ಸಂಖ್ಯೆ HR-55 S-3166 ರಲ್ಲಿ ನಿಗದಿಗಿಂತ ಹೆಚ್ಚಿನ ಜಾನುವಾರುಗಳನ್ನು ಹಾಕಿ ದೇವದುರ್ಗ ಕಡೆಯಿಂದ ಮಾನವಿ ಕಡೆಗೆ ಆಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದಾಗ ಮಾಹಿತಿ ಮೇರೆಗೆ ಸಾಕ್ಷಿ ನಂ1 ರವರು ಸಾಕ್ಷಿ ನಂ.6 ರವರೊಂದಿಗೆ 112 ವಾಹನದಲ್ಲಿ ಹೋಗಿ ದೇವದುರ್ಗದ PWD ಕಛೇರಿ ಹತ್ತಿರ ನಿಲ್ಲಿಸಿ ನೋಡಲಾಗಿ ಸದರಿ ವಾಹನದಲ್ಲಿ ಇರುವ ಜಾಗೆಯಲ್ಲಿ ಅಗತ್ಯಕ್ಕಿಂತ 26 ಜಾನುವಾರುಗಳು (25 ಎತ್ತುಗಳು/MALE ಒಂದು ಆಕಳು FEMALE) ಹೆಚ್ಚಿನ ಜಾನುವಾರುಗಳು ಹಾಕಿದ್ದು. ಸದರಿ ಜಾನವಾರುಗಳಿಗೆ ಸಾಕಮ್ಮ ಗಾಳಿ, ಇಲ್ಲದೇ ಉಸಿರಾಡಲು ತೊಂದರೆಯಾಗಿ ಒಂದರ ಮೇಲೊಂದರಂತೆ ಜಾನುವಾರುಗಳು ಬಿದ್ದು, ಒಂದರಿಂದ ಇನ್ನೊಂದಕ್ಕೆ ತೊಂದರೆಯಾಗಿ ಹಿಂಸೆಯಾಗುತ್ತಿರುವ ರೀತಿಯಲ್ಲಿ ಒಟ್ಟು 26 ಜಾನುವಾರುಗಳನ್ನು ಕಂಟೇನರ್ ವಾಹನದಲ್ಲಿ

ಸಾಗಾಣಿಕೆ ಮಾಡುತ್ತಿರುವುದು ಕಂಡು ಬಂದಿದ್ದು. **ಆ ಮೂಲಕ** ಆರೋಪಿತರಾದ ನಿಮ್ಮ **ಮೇಲೆ ಕಲಂ 11 of Prevention of Cruelty to Animals Act-1960** ರಡಿಯಲ್ಲಿ **ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.**

**ಮೇಲ್ಕಂಡ ಎಲ್ಲಾ ಆರೋಪಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತವೆ.**

**(ಮೇಲ್ಕಂಡ ಆಪಾದನೆಯನ್ನು ಆರೋಪಿತರಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ನೀಡಿದ ಉತ್ತರವನ್ನು ಬರೆದುಕೊಂಡು ಸರಿಯಾಗಿದೆ ಎಂದು ದೃಢೀಕರಿಸಿದೆ)**

ದಿನಾಂಕ **26.03.2026**
ಸ್ಥಳ ದೇವದುರ್ಗ

ಸಹಿ/-
(ಶ್ರೀ ರಫೀಕ್ ಅಹ್ಮದ್ )
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
ದೇವದುರ್ಗ.